ಕೇಂದ್ರ ಮಂಜೂರು ಆಗಿರುವುದು ನಿಜವೆ?

ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರ ಎಲ್ಲೆಲ್ಲಿವೆ ವಿವರ ತಿಳಿಸುವುದು:

ಈ) ಸದರಿ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಉ) ಈರೀತಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ: ಎ.ಬಿ.ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು 9, ಸಮುದಾಯ ಆರೋಗ್ಯ ಕೇಂದ್ರ ಇರುವುದಿಲ್ಲ.

ಆ) ಹೌದು.

ಇ) ಪ್ರಾಥಮಿಕ ಆರೋಗ್ಯ ಕೇಂದ್ರ ಇರುವ ಸ್ಥಳಗಳು ಶಿರೂರು, ಬೈಂದೂರು, ಕಿರಿ ಮಂಜೇಶ್ವರ, ಮರವಂತೆ, ಗಂಗೊಳ್ಳಿ, ನಾಡ, ಆಲೂರು, ಕೊಲ್ಲೂರು ಮತ್ತು ವಂಡ್ಸೆ.

ಈ) 46 ವಿವಿಧ ವರ್ಗಗಳ ಹುದ್ದೆಗಳು ಖಾಲಿ ಇರುತ್ತವೆ.

ಉ) ಖಾಲಿ ಇರುವ ವೈದ್ಯರ ಹುದ್ದೆ, ಮತ್ತು ಅತಿ ಅಗತ್ಯವಿರುವ ವೈದ್ಯೇತರ ಮತ್ತು ತಾಂತ್ರಿಕ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಆಯಾಯ ಜಿಲ್ಲಾಧಿಕಾರಿಯವರಿಗೆ ಸರ್ಕಾರವು ಅನುಮತಿ ನೀಡಿದೆ. ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ.

ಉಡುಪಿ ಸರ್ಕಾರಿ ಫಾರ್ಮಸಿ ತರಬೇತಿ ಶಾಲೆ ತೆರೆಯುವುದು.

173(430)

ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉಡುಪಿ, ಜಿಲ್ಲೆಯಾಗಿದ್ದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿರುವಂತೆ ಅಭಿವೃದ್ಧಿಯಾಗುತ್ತಿರುವ ಉಡುಪಿ ಜಿಲ್ಲೆಗೆ ಸರಕಾರಿ ಶುಶ್ರೂಷಕರ ತರಬೇತಿ ಶಾಲೆ,

ಲ್ಯಾಬ್‌ಟೆಕ್ನೀಷಿಯನ್, ಎಕ್ಸ್‌ರೇ ಟೆಕ್ನಿಷಿಯನ್ ಮತ್ತು ಫಾರ್ಮಸಿ ತರಬೇತಿ ಶಾಲೆಗಳನ್ನು ಮಂಜೂರು ಮಾಡಲಾಗುವುದೇ?

(ಆ) ಸಾಧ್ಯವಾಗದಿದ್ದಲ್ಲಿ ಕಾರಣ ನೀಡುವುದು?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

(ಅ) ಇಲ್ಲ.

(ಆ) ಪ್ರಸ್ತುತ, ಉಡುಪಿ ಜಿಲ್ಲೆಯಲ್ಲಿ ಮೂರು ನರ್ಸಿಂಗ್ ಶಾಲೆಗಳು ಅಸ್ತಿತ್ವದಲ್ಲಿರುತ್ತವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಬಹುತೇಕ ನರ್ಸಿಂಗ್ ಶಾಲೆಗಳು ಬೆಂಗಳೂರು ಮತ್ತು ಮೈಸೂರು ಕಂದಾಯ ವಿಭಾಗಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ, ವಿಭಾಗವಾರು ಅಸಮತೋಲನವನ್ನು ಸರಿಪಡಿಸಲು ಸರ್ಕಾರವು 1998ರಲ್ಲಿ 5 ವರ್ಷಗಳ ಅವಧಿಗೆ ಈ ವಿಭಾಗಗಳಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ತೆರೆಯಲು ನಿಷೇಧ ವಿಧಿಸಿದೆ. ಆದ್ದರಿಂದ, ಉಡುಪಿ ಜಿಲ್ಲೆಯಲ್ಲಿ ಹೊಸದಾಗಿ ನರ್ಸಿಂಗ್ ಶಾಲೆಯನ್ನು ಪ್ರಾರಂಭಿಸಲು ಅನುಮತಿ ನೀಡಲು ಅವಕಾಶವಿರುವುದಿಲ್ಲ.

ಅಲ್ಲದೆ, ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳ ವತಿಯಿಂದ ನಡೆಸಲ್ಪಡುತ್ತಿರುವ ಪ್ಯಾರಾ ಮೆಡಿಕಲ್ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶದ ಪ್ರಮಾಣವು ತೀರಾ ಕಡಿಮೆಯಾಗಿದ್ದು, ಬಹಳಷ್ಟು ಸೀಟುಗಳು ಭರ್ತಿಯಾಗದೇ ಉಳಿಯುತ್ತಿವೆ. ಆದ್ದರಿಂದ ಹೊಸದಾಗಿ ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಪ್ರಾರಂಭಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ರಾಜ್ಯದಲ್ಲಿ ಏಡ್ಸ್ ರೋಗದ ನಿಯಂತ್ರಣ.

174(221)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೆಚ್ಚುತ್ತಿರುವ ''ಏಡ್ಸ್'' ರೋಗದ ನಿಯಂತ್ರಣಕ್ಕೆ ಆರೋಗ್ಯ ಇಲಾಖೆ ವಿಶೇಷ ಯೋಜನೆಯನ್ನಾದರೂ ರೂಪಿಸಲಾಗಿದೆಯೆ?